ಅಸಲು ದಾವಾ ನಂಃ 402/2024

ಡಿ.ಡಬ್ಲೂ 2

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.**

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **21-02-2026**

**ಪಾಟೀಸವಾಲುಃ ವಾದಿ ಪರ ವಕೀಲರಿಂದ**

ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿ ನನಗೆ ರೂಡಿ ಇರುತ್ತದೆ. ಆದ್ದರಿಂದ ನನ್ನನ್ನು ಈ ದಿನ ಸಾಕ್ಷಿ ಹೇಳಲು ಕರೆಸಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಸಮನ್ಸ ಬಂದ ಮೇಲೆ ವಕೀಲರನ್ನು ಯಾರು ಭೇಟಿ ಮಾಡಿಸಿದ್ದರು ಎಂದರೆ ಸಾಕ್ಷಿಯು ನನಗೆ ಯಾರು ಭೇಟಿ ಮಾಡಿಸಿಲ್ಲ ಎಂದು ಹೇಳುತ್ತಾರೆ.

ಮೃತ ಪ್ರಕಾಶ ಅವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಈ ದಾವೆಯನ್ನು ಯಾವ ಕಾರಣಕ್ಕಾಗಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಮೃತ ಪ್ರಕಾಶ ಅವರು ಎಸ್.ಬಿ.ಐ ಅಲ್ಲಿ ಕೆಲಸ ಮಾಡುತ್ತಿದ್ದರು. ಸದರಿಯವರು ಅನಾರೋಗ್ಯದಿಂದ ಮರಣ ಹೊಂದಿದ ಮೇಲೆ ಅವರು ಮಾಡಿದ ಖರ್ಚು ಮಾಡಿ ಪುನರಪಾವತಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ಸಣ್ಣ ಮಗ ಕೈಗಡ ಸಾಲ ಮಾಡಿದ್ದ. ಸದರಿಯವರು ಬ್ಯಾಂಕ ಉದ್ಯೋಗಿ ಆಗಿದ್ದರಿಂದ ಬ್ಯಾಂಕನವರು ಆತನಿಗೆ ಸಾಲ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

ಅಸಲು ದಾವಾ ನಂಃ 402/2024

ಡಿ.ಡಬ್ಲೂ 2

ಸದರಿಯವರು ಬ್ಯಾಂಕನಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಹೊರಗಡೆ ಸಾಲ ತೆಗೆದುಕೊಳ್ಳುವ ಪ್ರಸಂಗ ಬರುವುದಿಲ್ಲ ಎಂದರೆ ಸಾಕ್ಷಿ ಅವರ ಸಣ್ಣ ಮಗ ಸಾಲ ಪಡೆದುಕೊಂಡಿದ್ದ ಅದನ್ನು ನಾನೇ ಕೊಡಿಸಿದ್ದೆ ಎಂದು ಹೇಳುತ್ತಾರೆ. ಸದರಿ ಅವರ ಸಣ್ಣ ಮಗ ಆತನ ದುಶ್ಚಟಕ್ಕೆ ಸಾಲ ಮಾಡಿದ್ದ ಎಂದರೆ ಸರಿಯಲ್ಲ. ಸದರಿಯವರ ಮಗನಿಗೆ ನಾನು ಸಾಲ ಕೊಡಿಸಿದ್ದರಿಂದ, ಸದರಿ ಸಾಲ ಮರುಪಾವತಿ ಮಾಡಬೇಕಾದರೆ ಸಾಕ್ಷಿ ಹೇಳಬೇಕು ಎಂದು ಹೇಳಿದ್ದರಿಂದ ನಾನು ಈ ದಿನ ಅವರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಪ್ರಕಾಶ ಸಂಪೂರ್ಣ ಕುಟುಂಬದ ಬಗ್ಗೆ ಹಾಗೂ ತಾಯಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇದೆ ಎಂದರೆ ಸಾಕ್ಷಿ ಪ್ರಕಾಶ ಅವರು ನನ್ನ ಮನೆಯಲ್ಲಿ ಬಾಡಿಗೆ ಇದ್ದರು ಆದ್ದರಿಂದ ಅವರ ಬಗ್ಗೆ ಮಾತ್ರ ಗೊತ್ತು ಎಂದು ಹೇಳುತ್ತಾರೆ. ಪ್ರಕಾಶ ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸದರಿಯವರು ಮನೆಯಲ್ಲಿ ಬಾಡಿಗೆಯಲ್ಲಿದ್ದಾಗ ನಾನು ಯಾವುದೇ ಕರಾರು ಪತ್ರ ಮಾಡಿಸಿಲ್ಲ. ಬಾಡಿಗೆದಾರರು ಕರಾರು ಪತ್ರ ಮಾಡಿಕೊಳ್ಳಬೇಕು ಎಂದರೆ ಸರಿ.

ಸದರಿಯವರು ನಮ್ಮ ಮನೆಯಲ್ಲಿ ಬಾಡಿಗೆ ಇರಲಿಲ್ಲ ಆದ್ದರಿಂದ ಕರಾರು ಪತ್ರ ಮಾಡಿಸಿಲ್ಲ ಎಂದರೆ ಸರಿಯಲ್ಲ. ಪ್ರಕಾಶ ಅವರು ಬ್ಯಾಂಕನ್ನು ಹೊರತು ಪಡಿಸಿ ಬೇರೆ ಕಡೆ ಸಾಲ ಮಾಡಿರಲಿಲ್ಲ. ನಾನು ಆತನಿಗೆ ಮಕ್ಕಳಿಗೆ ಕೊಟ್ಟ ಸಾಲ ಮರಳಿ ಬರುವುದಿಲ್ಲ ಎಂದು ಅವರ

ಅಸಲು ದಾವಾ ನಂಃ 402/2024

ಡಿ.ಡಬ್ಲೂ 2

ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ದಾವಾಸ್ವತ್ತಿಗೆ ಮನೆ ಕಟ್ಟಲು ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.